**ಮಧ್ಯಂತರ ಅರ್ಜಿ-1 ರ ಮೇಲೆ ಆದೇಶ**

ಮೇಲ್ಮನವಿದಾರರಪರ ವಕೀಲರು ಮಾನ್ಯ ನ್ಯಾಯಾಲಯಕ್ಕೆ ದಂಡ ಪ್ರಕ್ರಿಯಾ ಸಂಹಿತೆ ಕಲಂ.374 ರ / ಭಾರತಿಯ ನಾಗರೀಕ ಸುರಕ್ಷಾ ಸಂಹಿತೆ ಕಲಂ.415 ಅಡಿಯಲ್ಲಿ ಮೇಲ್ಮನವಿ ಸಲ್ಲಿಸಿ, 1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ., ದಾವಣಗೆರೆ ರವರು ದಿ.09-09-2024 ರಂದು ಸಿಸಿ.2334/2023 ರಲ್ಲಿ ನೀಡಿದ ತೀರ್ಪನ್ನು ರದ್ದು ಪಡಿಸಬೇಕೆಂದು ಮೇಲ್ಮನವಿ ಸಲ್ಲಿಸಿರುತ್ತಾರೆ.

ಹಾಗೂ ಮೇಲ್ಮನವಿದಾರಪರ ವಕೀಲರು ಮಾನ್ಯ ನ್ಯಾಯಾಲಯಕ್ಕೆ ದಂಡ ಪ್ರಕ್ರಿಯಾ ಸಂಹಿತೆ ಕಲಂ.389(1)ರ / ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ.430 ರ ಅಡಿಯಲ್ಲಿ ಮಧ್ಯಂತರ ಅರ್ಜಿ-1 ಸಲ್ಲಿಸಿ, ವಿಚಾರಣಾ ನ್ಯಾಯಾಲಯ ನೀಡಿದ ತೀರ್ಪನ್ನು ಅಮಾನತ್ತಿನಲ್ಲಿ ಇಡಬೇಕೆಂದು ವಿನಂತಿಸಿಕೊಂಡಿರುತ್ತಾರೆ.

ಎನ್ ಐ ಆಕ್ಟ್ ಕಲಂ.148 ಕಾನೂನನ್ನು ಪರಿಶೀಲಿಸಲಾಗಿ- ವಿಚಾರಣಾ ನ್ಯಾಯಾಲಯವು ನೀಡಿದ ತೀರ್ಪನ್ನು ಅಮಾನತ್ತಿನಲ್ಲಿಡಬೇಕಾದಲ್ಲಿ ಕನಿಷ್ಟ ದಂಡದ ಹಣದಲ್ಲಿ ಶೇಕಡಾ 20 ರಷ್ಟು ಅಥವಾ ಪರಿಹಾರದ ಹಣದಲ್ಲಿ ಶೇಕಡಾ 20 ರಷ್ಟನ್ನು ಆದೇಶವಾಗಿ 60 ದಿವಸಗಳೊಳಗಾಗಿ

ವಿಚಾರಣಾ ನ್ಯಾಯಾಲಯದಲ್ಲಿ ಠೇವಣಿ ಇಡಬೇಕು. ನಂತರ ತೀರ್ಪನ್ನು ಅಮಾನತ್ತಿನಲ್ಲಿಡಬೇಕು ಅಂತಾ ಸ್ಪಷ್ಟವಾದ ಕಾನೂನು ಇರುತ್ತದೆ. ಆದ್ದರಿಂದ ಈ ಕೆಳಗಿನಂತೆ

**<u>ಆದೇಶ</u>**

ಮಧ್ಯಂತರ ಅರ್ಜಿ–1 ನ್ನು ಪುರಸ್ಕರಿಸಲಾಯಿತು.

ವಿಚಾರಣಾ ನ್ಯಾಯಾಲಯವು ದಿ.09–09–2024 ರಂದು ಸಿಸಿ.2334/2023 ರಲ್ಲಿ ನೀಡಿದ ತೀರ್ಪನ್ನು ಮೇಲ್ಮನವಿದಾರರು ಆದೇಶವಾದ ಆರವತ್ತು ದಿನಗಳೊಳಗಾಗಿ ವಿಚಾರಣಾ ನ್ಯಾಯಾಲಯದಲ್ಲಿ ವಿಧಿಸಿದ ದಂಡದ ಹಣ ರೂ.2,12,000/– (ಎರಡು ಲಕ್ಷ ಹನ್ನೆರಡು ಸಾವಿರ ರೂಪಾಯಿ ಮಾತ್ರ) ದಲ್ಲಿ ಶೇಕಡಾ 20 ರಷ್ಟು ದಂಡದ ಹಣವನ್ನು ಠೇವಣಿ ಇಡತಕ್ಕದ್ದು ಅಂತಾ ಶರತ್ತಿನ ಆಧಾರದ ಮೇಲೆ ವಿಚಾರಣಾ ನ್ಯಾಯಾಲಯವು ನೀಡಿದ ಶಿಕ್ಷೆಯನ್ನು ಅಮಾನತ್ತಿನಲ್ಲಿಡಲು ಆದೇಶ ಮಾಡಲಾಯಿತು.

ಸದರಿ ಎದುರುದಾರರಿಗೆ ನೋಟೀಸನ್ನು ಹಾಗೂ ಅದೇಶದ ಪ್ರತಿಯನ್ನು ಕಳುಹಿಸಲು ಹಾಗೂ ವಿಚಾರಣಾ ನ್ಯಾಯಾಲಯದಿಂದ ಕಡತವನ್ನು ತರಿಸಿಕೊಳ್ಳಲು ಆದೇಶಿಸಲಾಗಿದೆ.

ಮುಂದಿನ ದಿನಾಂಕ. 12–12–2024

SD/–

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು , ದಾವಣಗೆರೆ